ಒದಗಿಸಿ ಕೊಡಬೇಕೆಂದು ನಾನು ತಮ್ಮ ಮುಖಾಂತರ ಮಾನ್ಯ ಸಾರಿಗೆ ಸಚಿವರನ್ನು ವಿನಂತಿಸಿ ಕೊಳ್ಳುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯಾ.—ಮಾನ್ಯ ಅಧ್ಯಕ್ಷರೇ, ಸೋಗಲ ಗ್ರಾಮವು ಬೆಳಗಾವಿ ಜಿಲ್ಲೆಯ ಸೌಂದತ್ತಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುತ್ತಿದ್ದು, ೧೯೮೧ರ ಜನಗಣತಿಯ ಪ್ರಕಾರ ಒಟ್ಟು ಳ್ಳಿ ಜನ ಸಂಖ್ಯೆ ಹೊಂದಿದೆ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ತಾಲ್ಲೂಕು ಕೇಂದ್ರವಾದ ಬೈಲಹೊಂಗಲಕ್ಕೆ ರಾಜಧಾನಿಯೊಡನೆ ನೇರ ಹಗಲು ವೇಗದೂತ ಸಾರಿಗೆಯು ಸಂಪರ್ಕ ಕಲ್ಪಿಸಿದೆ. ಇದೇ ರೀತಿ ರಾತ್ರಿ ಪ್ರಯಾಣ ಅಪೇಕ್ಷಿಸುವ ಜನತೆಗಾಗಿ ಬೈಲಹೊಂಗಲ ಮಾರ್ಗವಾಗಿ ಚಿಕ್ಕೋಡಿ–ಬೆಂಗಳೂರು ರಾತ್ರಿ ವೇಗದೂತ ಸಾರಿಗೆಯ ಸಂಪರ್ಕವನ್ನು ಸಹ ಕಲ್ಪಿಸಿದೆ. ಇವೆರಡೂ ಸಾರಿಗೆಗಳಲ್ಲಿ ಪ್ರಯಾಣಿಕರಿಗಾಗಿ ಇರುವ ಸ್ಥಳಾವಕಾಶದ ಶೇಕಡಾ ೭೦ರಷ್ಟನ್ನು ಮಾತ್ರ ಪ್ರಯಾಣಿಕ ವರ್ಗವು ಬಳಸಲಿತ್ತಿರುವುದರಿಂದ ಪ್ರಸಕ್ತ ಸಾರಿಗೆಗಳಲ್ಲಿ ಬೆಂಗಳೂರಿಗೆ ಪ್ರಯಾಣ ಮಾಡಬಯಸುವ ಹೆಚ್ಚಿನ ಪ್ರಯಾಣಿಕರು ಯಾವುದೇ ಅಡಚಣೆಯಿಲ್ಲದೇ ಸ್ಥಳಾವಕಾಶ ಪಡೆಯಬಹುದಾಗಿದೆ. ಈಗಾಗಲೇ ಸೋಗಲದಿಂದ ಕೂಡಲಸಂಗಮ, ಧಾರವಾಡ, ರಾಣೆ ದುರ್ಗ, ಎಡೆಯೂರು ಮತ್ತು ಕುಣಿಗಲ್‌ಗಳಿಗೆ ಸಾರಿಗೆ ಸೌಕರ್ಯ ಒದಗಿಸಲಾಗಿದ್ದು ಅವು ಇನ್ನೂ ಜನಾದಾರಣೆಯನ್ನು ಗಳಿಸಬೇಕಾಗಿದೆ. ಈ ಮೇಲಿನ ಕಾರಣಗಳಿಂದಾಗಿ ಸೋಗಲ ಮಾರ್ಗವಾಗಿ ಬೈಲಹೊಂಗಲದಿಂದ ಬೆಂಗಳೂರಿಗೆ ಸುವಿಹಾರಿ ಸಾರಿಗೆಯನ್ನು ಪ್ರಾರಂಭಿಸುವ ಆಗತ್ಯ ಕಂಡುಬರುತ್ತಿಲ್ಲ.

ಅಧ್ಯಕ್ಷರು.—ಶ್ರೀ ಗೋಪಾಲ ಮಂಕಂಂದ ಕಾನಡೆಯವರು.

## ೨) ಕರ್ನಾಟಕ ಹಾಲು ಮಹಾ ಮಂಡಳಿಯ ಕೇಂದ್ರ ಕಚೇರಿಯ ಮ್ಯಾನೇಜಿಂಗ್ ಡೈರೆಕ್ಟರ್‌ರವರು ಸುಮಾರು ೨೦೦ ಮಂದಿ ನೌಕರರನ್ನು ಕೆಲಸದಿಂದ ತೆಗೆದು ಹಾಕಿರುವುದು.

ಶ್ರೀ ಗೋಪಾಲ ಮಂಕುಂದ ಕಾನಡೆ.—ಮಾನ್ಯ ಅಧ್ಯಕ್ಷರೇ, ಕರ್ನಾಟಕ ಹಾಲು ಮಹಾ ಮಂಡಳಿಯ ಕೇಂದ್ರ ಕಛೇರಿಯಲ್ಲಿ ಹಿಂದಿನ ಮ್ಯಾನೆಜಿಂಗ್ ಡೈರಕ್ಟರ್‌ರವರಿದ್ದ ಸಮಯದಲ್ಲಿ ಸೌಕರಿಯಲ್ಲಿದ್ದವರ ಪೈಕಿ ಸುಮಾರು ೨೦೦ ಮಂದಿ ನೌಕರರುಗಳನ್ನು ಈಗಿನ ಡೈರಕ್ಟರ್ ತೆಗೆದಿದ್ದು ಆ ಪೈಕಿ ಅನುಸೂಚಿತ ಜಾತಿ ಹಾಗೂ ಪಂಗಡಗಳವರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆಂದು ತಿಳಿದು ಬಂದಿದ್ದು, ಈಗಿನ ಡೈರಕ್ಟರು ಮಂತ್ರಿ ೨೦ ಮಂದಿ ನೌಕರರುಗಳನ್ನು ಕೆಲಸಕ್ಕೆ ತೆಗೆದುಕೊಂಡಿರುವುದಾಗಿಯೂ ತಿಳಿದು ಬಂದಿದೆ. ಈ ಜನರ ಪೈಕಿ ಹಿಂದೆ ಕೆಲಸ ಮಾಡುತ್ತಿದ್ದ ಅನುಸೂಚಿತ ಜಾತಿ ಮತ್ತು ಪಂಗಡಕ್ಕೆ ಸೇರಿರುವ ನೌಕರರುಗಳು ಎಷ್ಟು ಎಂಬುದನ್ನು ಮತ್ತು ಆ ರೀತಿ ತೆಗೆಯಲು ಕಾರಣ ಏನು ಎಂಬುದನ್ನು ತಿಳಿಸಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಸಚಿವರು).—ಮಾನ್ಯ ಅಧ್ಯಕ್ಷರೇ, ನಾನು ಪಶು ಸಂಗೋಪನಾ ಸಚಿವರ ಪರವಾಗಿ ಈ ಹೇಳಿಕೆಯನ್ನು ಮಾಡಬಯಸುತ್ತೇನೆ.

ಕರ್ನಾಟಕ ಸಹಕಾರಿ ಹಾಲು ಮಹಾ ಮಂಡಲಿಯ ಕೇಂದ್ರ ಕಚೇರಿಯಲ್ಲಿ ಹಿಂದಿನ ವ್ಯವಸ್ಥಾಪಕ ನಿರ್ದೇಶಕರಿದ್ದ ಸಮಯದಲ್ಲಿ ನೌಕರಿಯಲ್ಲಿದ್ದವರ ಪೈಕಿ ೨೦೦ ಜನ ನೌಕರರನ್ನು ಈಗಿನ ವ್ಯವಸ್ಥಾಪಕ ನಿರ್ದೇಶಕರು ತೆಗೆದುಹಾಕಿದ್ದಾರೆಯೂ, ಹಾಗೂ ಅವರ ಪೈಕಿ ಅನುಸೂಚಿತ ಜಾತಿ ಹಾಗೂ ಪಂಗಡಗಳವರೇ ಹೆಚ್ಚಿನ ಸಂಖ್ಯೆಯಲ್ಲಿರುವರು ಎಂಬ ಆಪಾದನೆ ಸತ್ಯಕ್ಕೆ ದೂರವಾದದ್ದು.

ಈಗಿನ ವ್ಯವಸ್ಥಾಪಕ ನಿರ್ದೇಶಕರು ದಿನಾಂಕ ೧೬–೬–೧೯೮೮ರಂದು ಪೂರ್ವಾಹ್ನ ವ್ಯವಸ್ಥಾಪಕ ನಿರ್ದೇಶಕರಾಗಿ ಅಧಿಕಾರ ಪಹಿಸಿಕೊಂಡಿದ್ದು, ಅವರು ಯಾವುದೇ ನೌಕರರನ್ನು ಕೆಲಸಕ್ಕೆ ತೆಗೆದುಕೊಂಡಿರುವುದಿಲ್ಲ.